ತಾರೀಖು 26ನೇ ಜುಲೈ 1887.

ಹುಣಸೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತ್ಹವಜು ಕ್ರಮವಾದ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುಖ್ತಾರೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸು ಪಡಿಯಬೇಕು. ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ:—

ನಂಬರ್.	ದಸ್ತಾವೇಜನ್ನು ಬರದು ಕೊಟ್ಟವರ ಹೆಸರು ಮತ್ತು ಅಡಿಷನ್.	ದಸ್ತಾವೇಜನ್ನು ಬರಸಿ ಕೊಂಡವರ ಹೆಸರು ಮತ್ತು ಅಡಿಷನ್.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿ ಸಾಲ್ ಜರ್ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
389	ಹುಣಸೂರಲ್ಲಿರುವ ಕಂದಾರೆ ಸೈದ್ ಬಿಡ್ಡಿ ಸಾಬ್	ಹನಸೋಡು ಗ್ರಾಮದಲ್ಲಿ ಯಿರುವ ಮುಸಲ್‌ಮಾನರ	12—8—85	13—8—85	ಕ್ರಯಪತ್ರ ಭೂಸ್ಥಿತಿಗೆ ಸಂಬಂಧ ಪಟ್ಟದ್ದು. ಕ್ರಯದ ಮೊಬಲಗು
1884-85ನೇ ಇಸವಿ.	ಸೈದ್ ದುರ್ವೇಷ ಮಗ ವ್ಯಾಪಾರ ಕಸಬು.	ಹೈದರ್‌ಸಾಬಿ ಮಗ ಚಿಲ್ಲರೆ ದುರ್ಕಾದಾರ ಖಾಸಿಂಸಾಬಿ.			27 ರೂಪಾಯಿ.

ಹೆಚ್. ನಂಜುಂಡರಾಜ್ ಅರಸ್,
ಫಾರ್ ರಿಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 12ನೇ ಜುಲೈ 1887.

ಇದರಿಂದ ಸಂಬಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೇಲೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತ್ಹವಜನ್ನು ಹಾಜರ್ಮಾಡಿದವರೇಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುಖ್ತಾರೀಕರು ಯಾ ಹಕ್ಕುದಾರ್‌ರೇಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳುವಳಗಾಗಿ ಬೇಲೂರು ಸಬ್ ರಿಜಿಸ್ಟ್ರಾರ್‌ರಲ್ಲಿ ಹಾಜರಾಗಿ ಸದರೀ ದಸ್ತ್ಹವಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುವದು.

ನಂಬರ್.	ದಸ್ತ್ಹವಜು ಹಾಜರಿ ತಾರೀಖು.	ದಸ್ತ್ಹವಜು ರಿಜಿಸ್ಟ್ರಿಗೆ ಹಾಜರ್ ಮಾಡಿದ ತಾರೀಖು.	ದಸ್ತ್ಹವಜು ರಿಜಿಸ್ಟ್ರು ಮಾಡಿದ ತಾರೀಖು.	ದಸ್ತ್ಹವಜನ್ನು ಬರಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತ್ಹವಜನ್ನು ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	27—5—85	27—5—85	28—5—85	ನಾರ್ವೆ ಫಿರ್ಕಾ ಶಾನು ಭೋಗ ಬಂದಪ್ಪಯ್ಯನವರ ಹೆಂಡತಿ ಹೊನ್ನಮ್ಮ	ಸಕಲೇಶಪುರದಲ್ಲಿರುವ ಕೋಳೂರು ಪುಟ್ಟಯ್ಯನವರಮಗ ಅರಳಿಹಳ್ಳಿ ಕೇಕದಾರ್ ಸೀತಾರಾಮಯ್ಯ	ಯಾವ ದ್ವಿಶಿಷ್ಟ ಆಸ್ತಿ ವಿಚಾರ ಹೆ ವೈದ್ರಿ ವಸೂಲಿ ದಾವಾ ವಕ್ಫೈರೆ ಬಗ್ಯೆ, ಸರ್ವಾಧಿಕಾರ ವಹಿಸಿರುವ ಪತ್ರ.
1885—86						

ಪಿ. ಯಚ್. ಪೂರ್ಣಯ್ಯ, ರಿಜಿಸ್ಟ್ರಾರ್.

ತಾರೀಖು —ನೇ ಜುಲೈ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟಿನಲ್ಲಿರತಕ್ಕ ಕೆಲವು ಕಾಫೀ ತೋಟಗಳ ಮೇಲೆಬರೆ ಬೇಕಾದ ಕಂದಾಯದ ಬಾಕಿ ಅದ್ಯಾಪಿ ವಾಪತೀ ಆಗದೆ ಇರುವದರಿಂದ ಹರಾಜು ಮಾಡುವ ತಾರೀಖಿಗೆ ಹಿಂದಿನ ಅಥವಾ ಆ ತಾರೀಖು ವಳಗಾಗಿ ಸದರೀ ಕಂದಾಯ ಬಾರದೇ ಹೋದರೆ ಸ್ಟೇಟ್‌ಮೆಂಟಿನಲ್ಲಿ ನಮೂದಾಗತಕ್ಕ ಸ್ಥಳ ಮತ್ತು ತಾರೀಖುಗಳಲ್ಲಿ ಸದರೀ ಯಸ್ಟೇಟು ಗಳು ಹರಾಜು ಮಾಡಲ್ಪಡುವವು.